ಪಿ ಡಬ್ಲ್ಯೂ-1

<u>ಸಾಕ್ಷಿಯನ್ನು ದಿಃ 22.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ – ಶ್ರೀ ಸಿ ಎಂ ವಕೀಲರಿಂದಃ**</u>

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳೆಲ್ಲವೂ ಸತ್ಯವಾಗಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ.

ಎಫ್ ಐ ಆರ್ , ದೂರು, ಸ್ಥಳ ಮಹಜರ್, ಗಾಯದ ಪ್ರಮಾಣ ಪತ್ರ, ಐ ಎಂ ವಿ ವರದಿ, ಹೇಳಿಕೆ, ಹಾಗೂ ಅಂತಿಮ ವರದಿಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. 2 ಆಸ್ಪತ್ರೆ ಬಿಡುಗಡೆ ಪತ್ರ ನೋಡುತ್ತಿದ್ದು ಕ್ರಮವಾಗಿ ನಿಪಿ-8 ಮತ್ತು 9 ಎಂದು, 15 ಔಷಧಿ ಬಿಲ್ಸ್ ಗಳನ್ನು ನೋಡುತ್ತಿದ್ದು ಒಟ್ಟಾಗಿ ನಿಪಿ-10 ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿಪಿ-11 ಎಂದು, 4 ಎಕ್ಸ್ ರೇ ಇರುವ ಕವರ್ ನೋಡುತ್ತಿದ್ದು ಒಟ್ಟಾಗಿ ನಿಪಿ-12 ಎಂದು ಗುರುತಿಸಲಾಯಿತು. 3 ಫೋಟೋ ಸಿ ಡಿ ಜೊತೆ ನೋಡುತ್ತಿದ್ದು ಒಟ್ಟಾಗಿ ನಿಪಿ-13 ಎಂದು ಗುರುತಿಸಲಾಯಿತು.

<u>**ಶ್ರೀ ಟಿ ಡಿ ಕೆ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**</u>

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.